C.R.P.67

Form No.4
(Civil)
Deposition
Sheets
(R.P.No.57)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ.ನಂಃ 115/2021

ದಿನಾಂಕಃ 21.03.2024 ರಂದು ಪ್ರಮಾಣ ವಚನ ಬೋದಿಸಲಾಗಿದೆ

ಸಿ. ಡಬ್ಲ್ಯೂ :14 ಪಿ. ಡಬ್ಲ್ಯೂ : 16

| | |
|---|---|
| ಸಾಕ್ಷಿದಾರರ ಹೆಸರು | ಡಾ. ನಟರಾಜು |
| ತಂದೆಯ ಹೆಸರು | ಕೃಷ್ಣ ಮೂರ್ತಿ |
| ವಯಸ್ಸು | 48 ವರ್ಷ |
| ಉದ್ಯೋಗ | ಮೆಡಿಕಲ್ ಆಫೀಸರ್, ಶ್ರೀ ಲಕ್ಷ್ಮೀ ಆಸ್ಪತ್ರೆ, ಸುಂಕದಕಟ್ಟೆ, ಬೆಂಗಳೂರು. |
| ವಾಸ | ಬೆಂಗಳೂರು |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

1) ನಾನು ಕಳೆದ 10 ವರುಷಗಳಿಂದ ಮೇಲೆ ಹೇಳಿದ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕೆಲಸ ನಿರ್ವಹಿಸುತ್ತಿದ್ದೇನೆ.

2) ಬೆಳ್ಳೂರು ಪೊಲೀಸ್ ಠಾಣೆಯ ಪಿಎಸ್ಐ ರವರು ದಿಃ06.06.2020 ರಂದು ಗಾಯಾಳು ಚಾಸಾ.2 ಸತೀಶ್ ಹೇಳಿಕೆ ಕೊಡುವ ಸ್ಥಿತಿಯಲ್ಲಿ ಇದ್ದಾರ ಎಂದು ಕೇಳಿ ನಮ್ಮ ಆಸ್ಪತ್ರೆಗೆ ಒಂದು ಪತ್ರವನ್ನು ನೀಡಿದ್ದರು. ಅದನ್ನು ಈಗ ನೋಡುತ್ತಿದ್ದು, ನಿಪಿ.22 ಎಂದು ಗುರುತಿಸಲಾಯಿತು. ನಿಪಿ.22 ಪತ್ರಕ್ಕೆ, ಗಾಯಾಳು ಸತೀಶ್ ರವರ ಹೇಳಿಕೆಯನ್ನು ಮಾಡಬಹುದು ಎಂದು ನಾನು ಮೌಖಿಕವಾಗಿ ತಿಳಿಸಿದ್ದೆನು. ಸದರಿ ಗಾಯಾಳುವಿನ ಹೇಳಿಕೆಯನ್ನು ದಿಃ 06.06.2020 ರಂದು ಸಂಜೆ 7.00 ಗಂಟೆ ಸಮಯದಲ್ಲಿ, ಪೊಲಿಸೇರು ನಮ್ಮ ಆಸ್ಪತ್ರೆಗೆ ಬಂದು, ನಮ್ಮ ಅಸಿಸ್ಟೆಂಟ್ ರವರ ಸಮ್ಮುಖದಲ್ಲಿ ದಾಖಲಿಸಿಕೊಂಡರು.

<u>ಪಾಟೀ ಸವಾಲುಃ</u> ಆರೋಪಿ ಪರ, ಕಿರಿಯ ವಕೀಲರು, ಅವರ ಹಿರಿಯ ವಕೀಲರು ಮದ್ದೂರು ನ್ಯಾಯಾಲಯಕ್ಕೆ ಹಾಜರಾಗಿರುವುದರಿಂದ ಹಾಗೂ ಅವರ ಹಿರಿಯ ವಕೀಲರು ಬೆಳಗಿನ ಕಲಾಪದ ಅವಧಿಯಲ್ಲಿ ಈ ನ್ಯಾಯಾಲಯದಲ್ಲಿ ಹಾಜರಿದ್ದು, ವೈದ್ಯಾಧಿಕಾರಿಯು ಬೆಂಗಳೂರಿನಿಂದ ಮಧ್ಯಾಹ್ನ 3.00 ಗಂಟೆಗೆ ಸಾಕ್ಷಿ ನುಡಿಯಲು ಬರುವುದಾಗಿ ಸರ್ಕಾರಿ ಅಭಿಯೋಜಕರವರಿಗೆ ತಿಳಿಸಿದ ಮೇರೆಗೆ, ಸದರಿ ಪ್ರಕರಣದ ವಿಚಾರಣೆಯನ್ನು ಮಧ್ಯಾಹ್ನ 3.00 ಗಂಟೆಗೆ ತೆಗೆದುಕೊಳ್ಳಲಾಯಿತು, ಆದಕಾರಣ ಆರೋಪಿಯ ಹಿರಿಯ ವಕೀಲರು ಮಧ್ಯಾಹ್ನದ ಅವಧಿಯಲ್ಲಿ ಲಭ್ಯವಿಲ್ಲದ ಕಾರಣ, ಪಾಟೀ ಸವಾಲಿಗೆ ಸಮಯವನ್ನು ನೀಡಲಾಯಿತು.

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.